# ಎನ್‌ಐಟಿಕೆಯಲ್ಲಿ 'ವಿಜ್ಞಾನ ಜ್ಯೋತಿ' ಕಾರ್ಯಕ್ರಮ




**ಸುರತ್ಕಲ್, ನ. 18:** ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಾಯೋಜಿಸಿದ, ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸುರತ್ಕಲ್, ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್ ಎನ್‌ಐಟಿಕೆ, ಜೆಎನ್‌ವಿ ದ.ಕ. ಇವುಗಳ ಸಹಭಾಗಿತ್ವದಲ್ಲಿ, ಇತ್ತೀಚೆಗೆ 'ವಿಜ್ಞಾನ ಜ್ಯೋತಿ' ಕಾರ್ಯಕ್ರಮವನ್ನು ಎನ್ ಐಟಿಕೆಯಲ್ಲಿ ಆಯೋಜಿಸಲಾಯಿತು.

ಹುಡುಗಿಯರಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಹೆಚ್ಚಿಸಲು ಮತ್ತು ಯಾವುದೇ ಲಿಂಗ ಪಕ್ಷಪಾತವಿಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನದ ವೈವಿಧ್ಯಮಯ ಕ್ಷೇತ್ರಗಳನ್ನು ಆಯ್ಕೆ ಮಾಡಲು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ವಿದ್ಯಾರ್ಥಿಗಳು ಎನ್ ಐಟಿಕೆಯ ಕೇಂದ್ರೀಯ ಸಂಶೋಧನ ಸೌಲಭ್ಯಕ್ಕೆ ಭೇಟಿ ನೀಡಿ ಅದರಲ್ಲಿ ಲಭ್ಯವಿರುವ ವಿಶ್ವದರ್ಜೆಯ ಸಂಶೋಧನ ಸೌಲಭ್ಯಗಳ ಬಗ್ಗೆ ತಿಳಿದುಕೊಂಡರು.

ಎನ್‌ಐಟಿಕೆ ಸುರತ್ಕಲ್‌ನಲ್ಲಿ ಸ್ಥಾಪಿಸಲಾದ ಜೈವಿಕ ಅನಿಲ ಘಟಕದಲ್ಲಿ ಆಹಾರ ತ್ಯಾಜ್ಯ ಮರುಬಳಕೆ ಪ್ರಕ್ರಿಯೆಯಿಂದ ಉತ್ಪತ್ತಿಯಾಗುವ ಜೈವಿಕ ಅನಿಲದ ಕುರಿತು ಒಳನೋಟಗಳನ್ನು ಪಡೆಯಲು ವಿದ್ಯಾರ್ಥಿಗಳು ಇಟಲಿಯ ಮೈರೆ ಟೆಕ್ನಿಮಾಂಟ್ ಕಂಪೆನಿಯು ಪ್ರಾಯೋಜಿಸಿರುವ ಜೈವಿಕ ತ್ಯಾಜ್ಯ ಮರುಬಳಕೆ ಘಟಕಕ್ಕೆ ಭೇಟಿ ನೀಡಿದರು. ಬಳಿಕ ಅನೇಕ ರೀತಿಯ ಡ್ರೋನ್‌ಗಳು ಮತ್ತು ಸಿಎಸ್‌ಡಿಯ ಉನ್ನತ 3ಡಿ ಮುದ್ರಣ ತಂತ್ರಜ್ಞಾನದ ಬಗ್ಗೆ ತಿಳಿಯಲು ಎನ್‌ಐಟಿಕೆಯಲ್ಲಿನ ಸೆಂಟರ್ ಫಾರ್ ಸಿಸ್ಟಮ್ ಡಿಸೈನ್‌ಗೆ ಭೇಟಿ ನೀಡಿದರು. ಇದಲ್ಲದೆ, ಅವರು ಸ್ಟೆಪ್ ಮತ್ತು ಇತರ ಎನ್ ಐಟಿಕೆ ಇಲಾಖೆಗಳಿಗೆ ಭೇಟಿ ನೀಡಿದರು. ಪ್ರಭಾರ ನಿರ್ದೇಶಕ ಪ್ರೊ| ಜಿ.ಸಿ. ಮೋಹನ್ ಕುಮಾರ್, ಸ್ಟೆಪ್‌ನ ಸಂಯೋಜಕ ಪ್ರೊ| ಅರುಣ್ ಎಂ. ಇಸ್ಲೂರ್, ಜೆಎನ್‌ವಿ ಮುಡಿಪು ಪ್ರಾಂಶುಪಾಲ ಪಿ.ರಾಜೇಶ್ ಉಪಸ್ಥಿತರಿದ್ದರು.

Udayavani, date: 19/11/22 p, sudina- 02